ಆ) ಬೀದರ್ ಜಿಲ್ಲೆಯಲ್ಲಿ ಹಾಲಿನ ಡೇರಿ ತೆರೆಯಲು ತುಂಬಾ ಅನುಕೂಲವಾದ ಪ್ರದೇಶವಿರುವುದರಿಂದ ಈ ಡೇರಿಯನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವರೆ?

ಇ) ಹಾಗಿದ್ದಲ್ಲಿ, ಎಷ್ಟು ತಿಂಗಳಲ್ಲಿ ಈ ಡೇರಿಯನ್ನು ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು):

ಆ) ಬೀದರ್ ಜಿಲ್ಲೆಯಿಂದ ಬೇರೆ ಜಿಲ್ಲೆಯಾದ ಗುಲ್ಬರ್ಗಾ ಡೇರಿಗೆ ದಿನಂಪ್ರತಿ 22,000 ಲೀಟರ್ ಹಾಲು ಸರಬರಾಜು ಮಾಡಲಾಗುತ್ತಿದೆ.

ಆ) ಹೌದು.

ಇ) ಪ್ರತಿ ದಿನ 30,000 ಲೀಟರ್ ಸಾಮರ್ಥ್ಯದ ಒಂದು ಮಿನಿ ಡೇರಿಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಹಣಕಾಸು ನೆರವು ಕೋರಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸಲ್ಲಿಸಲಾಗಿದೆ. ಹೆಚ್ಚಿನದಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಬೀದರ್‌ದಲ್ಲಿ ಹಾಲು ಉಪಯೋಜನೆಯ ಮಧ್ಯಂತರ ವಿಮರ್ಶೆಯಲ್ಲಿ ಒಂದು ಹಾಲು ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಕೋರಲಾಗುವುದು. ಅವರು ತೆಗೆದುಕೊಂಡ ಕ್ರಮದ ಪ್ರತಿಕ್ರಿಯೇ ತಿಳಿದ ನಂತರ ಕ್ರಮ ಕೈಗೊಳ್ಳಲಾಗುವುದು.

ಮುಂಡರಗಿ ತಾಲ್ಲೂಕು ಕಛೇರಿ

2569 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ. ಮುಂಡರಗಿ ತಾಲ್ಲೂಕು ಕಛೇರಿಯು ಶಿಥಿಲಗೊಂಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಸಬ್ ಟ್ರಜರಿ ಕಛೇರಿ ಬೆಂಕಿಗೆ ಆಹುತಿಯಾದ ಕಾರಣ ತಾಲ್ಲೂಕು ಕಛೇರಿಯು ಈ ರೀತಿಯ ತೊಂದರೆಗೊಳಗಾಗಬಹುದೆಂಬ ಭೀತಿಯಿದ್ದು ತಾಲ್ಲೂಕು ಕಛೇರಿಯನ್ನು ಬೇರೆ ಸ್ಥಳಕ್ಕೆ ವರ್ಗಾವಣೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಇ. ತಹಶೀಲ್ದಾರ್ ಹಾಗೂ ಸಬ್‌ಟ್ರಜರಿ ಕಛೇರಿಗಳು ಒಂದೇ ಕಡೆ ಕಟ್ಟುವ ಯೋಜನೆಯನ್ನು (ಹಿಂದಿನ) ಸರ್ಕಾರದವರು ಮಂಜೂರು ಮಾಡಿದ್ದು ಇದುವರೆಗೂ ಕಾರ್ಯಗತವಾಗದಿರಲು ಕಾರಣಗಳೇನು?ಹಾಗಿದ್ದಲ್ಲಿ ಈ ಕೆಲಸವನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು) :

ಅ. ಹೌದು.

ಆ. ಹೌದು.

ಇ. ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ. ಆಯವ್ಯಯದಲ್ಲಿ ಅನುದಾನ ಒದಗಿಸಿದ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ಮಹದೇಶ್ವರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳ ಬಗ್ಗೆ

2307 - ಶ್ರೀ ಜಿ. ರಾಜುಗೌಡ (ಹನೂರು) ; ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?